ಪ್ರಶ್ನೆ

ಅ) ಸರ್ಕಾರ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮೂಲಕ ಮಾತ್ರ ಸ್ಟಾಂಪ್ ಪೇಪರ್ ವಿತರಣೆ ವ್ಯವಸ್ಥೆ ಮಾಡಿದ್ದು, ಎಲ್ಲಾ ಕಡೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆ ಇಲ್ಲದಿರುವುದು, ಇದ್ದರೂ ಆಯಾದಿನ ೨.೩೦ಕ್ಕೆ ಸ್ಟಾಂಪ್ ಪೇಪರ್ ವಿತರಣೆ ಅವಧಿ ಮುಗಿಯುವುದರಿಂದ ಖರೀದಿಸುವವರಿಗೆ ತೊಂದರೆ ಆಗಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ?

ಉತ್ತರ

ಕರ್ನಾಟಕದಲ್ಲಿ ದಿನಾಂಕ : ೧.೪.೨೦೦೩ ರಿಂದ ಜಾರಿಗೆ ಬರುವಂತೆ ಛಾಪಾ ಕಾಗದಗಳ ಬಳಕೆಯನ್ನು ಸ್ಥಗಿತಗೊಳಿಸಲಾಗಿದೆ. ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ ಈ ಶಾಖೆಗಳಲ್ಲಿ ಹಾಗೂ ಎಲ್ಲಾ ಷೆಡ್ಯೂಲ್ ಬ್ಯಾಂಕುಗಳಿಂದ ಪಡೆದ ಡಿಮ್ಯಾಂಡ್ ಡ್ರಾಪ್ಟ್ ಪೇ ಆರ್ಡರ್ ರಶೀತಿ ಇವುಗಳ ಆಧಾರದ ಮೇಲೆ ದಸ್ತಾವೇಜುಗಳನ್ನು ನೋಂದಣಿ ಮಾಡಲಾಗುತ್ತಿದೆ. ಆದ್ದರಿಂದ ದಸ್ತಾವೇಜುಗಳ ನೋಂದಣಿಗೆ ಪಾವತಿಸಬೇಕಾದ ಮುದ್ರಾಂಕ ಶುಲ್ಕ ಸ್ವೀಕರಿಸಲು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಅಲ್ಲದೆ ಬೇರೆ ಬ್ಯಾಂಕುಗಳಲ್ಲಿಯೂ ಸಹ ವ್ಯವಸ್ಥೆ ಇರುತ್ತದೆ. ನೋಂದಣಿ ಪೂರ್ವದಲ್ಲಿಯೇ ಶುಲ್ಕ ಪಾವತಿಸಬಹುದಾಗಿರುವುದರಿಂದ ಡಿಮ್ಯಾಂಡ್ ಡ್ರಾಪ್ಟ್ : ಪೇ ಆರ್ಡರ್ ರಶೀತಿಗಳ ಮೂಲಕ ಹಿಂದಿನ ದಿನವೇ ಶುಲ್ಕ ಪಾವತಿಸಬಹುದಾಗಿದೆ.

ಪ್ರಶ್ನೆ

ಆ) ರೈತರಿಗೆ ಡಿ.ಸಿ.ಸಿ. ಬ್ಯಾಂಕುಗಳು ತುಂಬ ಸಹಕಾರಿ ಆಗಿದ್ದು, ಇನ್ನು ಮುಂದೆ ಸರ್ಕಾರ ಈ ಡಿ.ಸಿ.ಸಿ. ಬ್ಯಾಂಕ್ ಶಾಖೆಗಳ ಮುಖಾಂತರ ಸ್ಟಾಂಪ್ ಪೇಪರ್ ವಿತರಿಸಲು ಕ್ರಮ ಕೈಗೊಳ್ಳುವುದೇ (ವಿವರ ನೀಡುವುದು)

ಉತ್ತರ

ಆ) ಛಾಪಾ ಕಾಗದದ ಬದಲಾಗಿ ಐಚ್ಛಿಕ ನೋಂದಣಿ ದಸ್ತಾವೇಜುಗಳಿಗೆ ದೃಢೀಕೃತ ಡಾಕ್ಯುಮೆಂಟ್ ಶೀಟ್‌ಗಳನ್ನು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು, ಸ್ಟೇಟ್ ಬ್ಯಾಂಕ್ ಆಫ್ ಹೈದ್ರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾಗಳಿಂದ ಪಡೆಯಲು ವ್ಯವಸ್ಥೆ ಮಾಡಲಾಗಿದೆ. ಇವುಗಳು ಟ್ರೆಜರಿ ಬ್ಯಾಂಕುಗಳಾಗಿರುತ್ತವೆ. ಡಿ.ಸಿ.ಸಿ.

ಬ್ಯಾಂಕುಗಳು ಮತ್ತು ಇತರೆ ಬ್ಯಾಂಕುಗಳಿಗೆ ದೃಢೀಕೃತ ಡಾಕ್ಯುಮೆಂಟ್ ಶೀಟುಗಳ ತಯಾರಿಕೆ : ವಿತರಣೆಗೆ ಅನುಮತಿ ನೀಡುವುದು ಸಂರಕ್ಷತೆ ಹಾಗೂ ಲೆಕ್ಕ ಮರು ಹೊಂದಾಣಿಕೆ ದೃಷ್ಟಿಯಿಂದ ಸೂಕ್ತವಲ್ಲ.

ಶ್ರೀ ಎಸ್.ಎಲ್. ಧರ್ಮೇಗೌಡ: ಮಾನ್ಯ ಅಧ್ಯಕ್ಷರೆ, ಮಾನ್ಯ ಮಂತ್ರಿಗಳು ಉತ್ತರವನ್ನು ಒದಗಿಸಿದ್ದಾರೆ ಆದರೆ ದಯಮಾಡಿ ಎರಡನೆಯ ಪ್ರಶ್ನೆಯಲ್ಲಿ ರೈತರಿಗೆ ಈಗಾಗಲೇ ಡಿ.ಸಿ.ಸಿ ಬ್ಯಾಂಕ್ ಮುಖಾಂತರ ಹೆಚ್ಚು ಸಹಕಾರಿ ಆಗಿತ್ತು, ಸ್ಟ್ಯಾಂಪ್ ಪೇಪರ್ ವಿತರಿಸುವ ಜವಾಬ್ದಾರಿಯನ್ನು ಇವತ್ತು ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಒದಗಿಸಿರುವುದು ಸರಿಯಷ್ಟೇ. ಇದರಲ್ಲಿ ಕೊಟ್ಟಿರತಕ್ಕಂಥ ಉತ್ತರದಲ್ಲಿ ವಿತರಣೆ, ಅನುಮತಿ ನೀಡುವುದು ಸುರಕ್ಷತೆ ಹಾಗೂ ಲೆಕ್ಕ ಮರು ಹೊಂದಾಣಿಕೆ ದೃಷ್ಟಿಯಿಂದ ಸೂಕ್ತವಲ್ಲ ಎಂದು ಉತ್ತರ ಕೊಟ್ಟಿದ್ದಾರೆ. ದಯಮಾಡಿ ಮಾನ್ಯ ಸಚಿವರು ತುಂಬಾ ಅನುಭವಿಗಳು, ಬಹಳಷ್ಟು ನುರಿತಂಥವರು ಆಗಿರುವುದರಿಂದ ದಯಮಾಡಿ ಇದನ್ನು ಮರು ಪರಿಶೀಲನೆಯನ್ನು ಮಾಡಿ. ಅಧಿಕಾರಿಗಳು ಕೊಟ್ಟಿರತಕ್ಕಂಥ ಈ ಉತ್ತರ ಅಷ್ಟೊಂದು ಸಮಂಜಸವಾಗಿ ಕಾಣುತ್ತಿಲ್ಲ, ಏಕೆಂದರೆ ನಿಮ್ಮದೇ ಆದಂತಹ ಇಡೀ ರಾಜ್ಯದಾದ್ಯಂತ ರೈತರಿಗೆ ಅನುಕೂಲ ಆಗುತ್ತಿರುವಂತಹ ಜಿಲ್ಲಾ ಸಹಕಾರ ಕೇಂದ್ರ ಬ್ಯಾಂಕ್ ಆಗಿರುವುದರಿಂದ ನಾವು ಅದನ್ನು ಕೆಟ್ಟ ದೃಷ್ಟಿಯಲ್ಲಿ ಮತ್ತು ಆಗುವುದಿಲ್ಲ ಎಂದು ನೋಡತಕ್ಕದ್ದು ಸೂಕ್ತವಲ್ಲ ಎಂದು ಒಂದು ವಿಚಾರ. ಎರಡನೆಯದು ಮುಜರಾಯಿಯಲ್ಲಿ ಬರತಕ್ಕಂಥ ಹಣವನ್ನು ಸಹ ನೀವು ರಾಷ್ಟ್ರೀಕೃತ ಬ್ಯಾಂಕ್‌ನಲ್ಲಿಡಿ ಎಂದು ಹೇಳಿದ್ದೀರಿ. ಆದ್ದರಿಂದ ದಯಮಾಡಿ, ಇದು ಅಷ್ಟೊಂದು ಸೂಕ್ತವಾಗಿ ಕಾಣುವುದಿಲ್ಲ ಆದ್ದರಿಂದ ಮರು ಪರಿಶೀಲನೆ ಮಾಡಿ ಇನ್ನೊಮ್ಮೆ ತಾವು ಆಲೋಚನೆ ಮಾಡಿ ಈ ಸ್ಟ್ಯಾಂಪ್ ಪೇಪರ್ ಅನ್ನು ಖರೀದಿ ಮಾಡತಕ್ಕದ್ದನ್ನು ಮತ್ತೊಂದನ್ನು ಮಾಡಿದಾಗ ಅಲ್ಲಲ್ಲೇ ತಾಲ್ಲೂಕು ಹೆಡ್‌ಕ್ವಾರ್ಟರ್‌ಗಳಲ್ಲಿ ಜಿಲ್ಲಾ ಹೆಡ್‌ಕ್ವಾರ್ಟರ್‌ಗಳಲ್ಲಿ ಜಿಲ್ಲಾ ಸಹಕಾರಿ ಕೇಂದ್ರ ಬ್ಯಾಂಕ್‌ಗಳ ಮುಖಾಂತರ ಮಾಡತಕ್ಕದ್ದು ಅನುಕೂಲ ಆಗುತ್ತದೆ. ಅದನ್ನು ಮರು ಪರಿಶೀಲನೆ ಮಾಡಬೇಕೆಂದು ನಾನು ತಮ್ಮಲ್ಲಿ ಒತ್ತಾಯ ಮಾಡುತ್ತೇನೆ.

ಶ್ರೀ ಎಂ.ಪಿ. ಪ್ರಕಾಶ್ (ಮಾನ್ಯ ಕಂದಾಯ ಸಚಿವರು) : ಮಾನ್ಯ ಅಧ್ಯಕ್ಷರೆ, ಮಾನ್ಯ ಸದಸ್ಯರು ಕೇಳಿದಂತಹ ಪ್ರಶ್ನೆಗೆ ಈಗಾಗಲೇ ಅದು ಡಿಸಿಸಿ ಬ್ಯಾಂಕ್‌ಗಳು ಶೆಡ್ಯೂಲ್ ಬ್ಯಾಂಕೂ ಅಲ್ಲ, ಟ್ರೆಜರಿ ಬ್ಯಾಂಕ್‌ಗಳೂ ಕೂಡ ಅಲ್ಲ, ಈ ವ್ಯವಸ್ಥೆಯನ್ನು ತಂದಿರತಕ್ಕ ಕಾರಣ ಅನೇಕ ಕರೀಂಲಾಲಾಗಳು ಹುಟ್ಟಿಕೊಂಡು ಈ ತರಹದ ಸೃಷ್ಟಿ ಮಾಡಿದಂತಹ ದಾಖಲೆಗಳು ಆಗುತ್ತವೆ ಎನ್ನುವ ಕಾರಣಕ್ಕಾಗಿಯೇ, ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಮತ್ತು ಅದೇ

ರೀತಿ ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಆಮೇಲೆ ಕಾರ್ಪೋರೇಷನ್ ಬ್ಯಾಂಕ್‌ಗಳು ಈ ತರಹದ ಶೆಡ್ಯೂಲ್ಡ್ ಬ್ಯಾಂಕ್‌ಗಳಿಗೆ ನಾವು ಈ ತರಹದ ಅಧಿಕಾರವನ್ನು ಕೊಟ್ಟಿದ್ದೇವೆ. ಡಿಸಿಸಿ ಬ್ಯಾಂಕ್‌ಗಳು ಅವು ಶೆಡ್ಯೂಲ್ಡ್ ಬ್ಯಾಂಕ್‌ಗಳು ಅಲ್ಲ ಮತ್ತು ಟ್ರೆಜರಿ ಬ್ಯಾಂಕ್‌ಗಳೂ ಅಲ್ಲ. ಆದರೆ ಅದರಿಂದ ರೈತರಿಗೆ ಮತ್ತು ಅಲ್ಲಿ ನೋಂದಾಯಿಸಲು ಬಂದಿರತಕ್ಕಂಥ ಗ್ರಾಹಕರಿಗೆ ತೊಂದರೆ ಆಗುತ್ತದೆ ಎನ್ನುವುದು ಕೂಡ ನಮ್ಮ ಗಮನಕ್ಕೆ ಬಂದಿದೆ. ಅದಕ್ಕಾಗಿಯೇ ನಾವು ಕೆಲವು ಪರ್ಯಾಯವಾದಂತಹ ಯೋಜನೆಗಳನ್ನು ಯೋಚನೆ ಮಾಡುತ್ತಿದ್ದೇವೆ. ಒಂದನೆಯದು ಇದಕ್ಕೆ ಬೇಕಾಗಿರತಕ್ಕ ಕೌಂಟರನ್ನು ನಾವೇ ತೆಗೆದುಕೊಂಡು ಆ ಕೆಲಸವನ್ನು ಮಾಡಬಹುದು. ಈಗಾಗಲೇ ಕಾನೂನಿನ ಅಡಿಯಲ್ಲಿ ಬಳಿ ಹಾಳೆಯ ಮೇಲೆ ಬರೆದು ತಂದು ಅದನ್ನು ಒಳಗಡೆ ಕೊಟ್ಟರೆ ಅದನ್ನು ದೃಢೀಕರಿಸತಕ್ಕ ಅವಕಾಶ ಕೂಡ ಅಲ್ಲಿ ಇದೆ. ಆದರೆ ಬಳಿಯ ಹಾಳೆಯನ್ನು ನಾವು ಕೊಡುವುದಕ್ಕೆ ಆಗುವುದಿಲ್ಲ. ಇಲ್ಲಿ ಪಾಲುದಾರಿಕೆ ಮಾಡತಕ್ಕದ್ದು ಇರಬಹುದು, ಅಪಿಡವಿಟ್ ಆಗಿರಬಹುದು. ದತ್ತು ಪತ್ರ ಇರಬಹುದು. ಸ್ವಾಧೀನತೆ ಇಲ್ಲದ ಒಡಂಬಡಿಕೆ ಪತ್ರ ಇರಬಹುದು. ಇವುಗಳಿಗೆಲ್ಲವಕ್ಕೂ ಕೂಡ ನೋಂದಾಣಿಕೆ ಎನ್ನತಕ್ಕದ್ದು ಐಚ್ಛಿಕ ವಿಷಯ ಆಗಿರತಕ್ಕಂಥದ್ದು. ಆದ್ದರಿಂದ ಅಲ್ಲಿ ತೊಂದರೆ ಆಗಬೇಕಾದಂತಹ ಅವಶ್ಯಕತೆ ಇಲ್ಲ. ಅಲ್ಲಿಗೂ ಕೂಡ ತಮಗೆ ಬೇಕು ಎನ್ನುವುದಾದರೆ ದೃಢೀಕೃತ ಪತ್ರವನ್ನು ತಾವು ಕೊಡತಕ್ಕದ್ದು ಆಗಿ ಬಳಿಯ ಹಾಳೆಯ ಮೇಲೆ ಬರೆದು ಕೊಟ್ಟರೂ ಕೂಡ ಎಲ್ಲೆಲ್ಲಿ ಬ್ರಾಂಚ್ ಆಫೀಸ್‌ಗಳು ಇಲ್ಲ, ಶಾಖೆಗಳು ಇಲ್ಲ, ಅಲ್ಲಿ ತೊಂದರೆ ಆಗುತ್ತದೆ ಎನ್ನುವ ಕಾರಣಕ್ಕಾಗಿ ಬಳಿಯ ಹಾಳೆಯ ಮೇಲೆ ಬರೆದುಕೊಂಡು ತೆಗೆದುಕೊಂಡು ಬಂದರೂ ಕೂಡ ಅದನ್ನು ನಾವು ಮುದ್ರಿಸಬೇಕು ಎಂದು ಇದೆ. ಅದರ ಜೊತೆಗೆ ನಮಗೆ ಅಲ್ಲೇ ಒಂದು ಮಿಷನ್ ಅನ್ನು ಕೊಡತಕ್ಕದ್ದು ಈಗ ಇದೆ. ನಮ್ಮ ಐಜಿಆರ್ ಅವರು ಅದು ಎಷ್ಟರಮಟ್ಟಿಗೆ ಫುಲ್ ಪ್ರೂಫ್ ಆಗಿರುತ್ತದೆ? ಎಂದು ನೋಡುತ್ತಾರೆ. ಅದರಲ್ಲಿ ಮೋಸ ಅಥವಾ ಅದರಲ್ಲಿ ಇನ್ನೊಬ್ಬರು ಪ್ರವೇಶ ಮಾಡಿ ಅಲ್ಲಿ ಏನಾದರೂ ಸೃಷ್ಟಿ ಮಾಡತಕ್ಕಂಥ ಅವಕಾಶ ಇದ್ದಂತಹದು ಇದ್ದರೆ ಅಂತಹ ಒಂದು ಮಿಷನ್‌ಗಳು ಈಗಾಗಲೇ ಬಂದಿದ್ದಾವೆ. ಅದರ ಬಗ್ಗೆನೂ ಯೋಚನೆ ಮಾಡಿ ಒಂದು ಕೌಂಟರ್ ಮಾಡಬೇಕು ಎನ್ನತಕ್ಕದ್ದರ ಬಗ್ಗೆ ಕೂಡ ಯೋಚನೆ ಮಾಡುತ್ತೇವೆ. ಒಟ್ಟಿನಲ್ಲಿ ಅಲ್ಲಿ ಗ್ರಾಹಕರಿಗೆ, ಅಲ್ಲಿ ನೋಂದಾಯಿಸಲು ಬಂದಿರತಕ್ಕವರಿಗೆ ತೊಂದರೆ ಆಗಲಾರದ ರೀತಿಯಲ್ಲಿ ಈ ಸಮಸ್ಯೆಯನ್ನು ನಾವು ಬಗೆಹರಿಸುತ್ತೇವೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮಾನ್ಯ ಅಧ್ಯಕ್ಷರೆ, ಮಾನ್ಯ ಸಚಿವರಾದ ಎಂ.ಪಿ. ಪ್ರಕಾಶ್ ಅವರಲ್ಲಿ ನಾನು ವಿನಂತಿಸಿಕೊಳ್ಳುವುದೇನೆಂದರೆ ಈಗ ನಮ್ಮ ಕ್ಷೇತ್ರ ಅಂಕೋಲಾ ಇದೆ. ನಮ್ಮಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಇಲ್ಲ. ಕಾರವಾರಕ್ಕೆ ಹೋಗಬೇಕು.

ನೀವು ಯಾವುದಾದರೂ ಒಂದು ನ್ಯಾಷನಲೈಸ್ಡ್ ಬ್ಯಾಂಕ್‌ಗೆ ಕೊಡಿ. ಆದರೆ ನಾವು ೪೦ ಕಿಲೋ ಮೀಟರ್ ಅಂಕೋಲಾದಿಂದ ಕಾರವಾರಕ್ಕೆ ಹೋಗಿ ಬರುವುದು ಎಂದರೆ ಇದು ಪ್ರತಿ ಒಬ್ಬನಿಗೂ ತೊಂದರೆ ಆಗುತ್ತಿದೆ. ಈ ಸ್ಟ್ಯಾಂಪ್ ಪೇಪರ್ ಅದು ಅಧಿಕೃತವಾಗಿ ರದ್ದು ಆಗಿದ್ದರೂ ಸಹ ಬೇರೆ ಬೇರೆ ಅನೇಕ ಚಟುವಟಿಕೆಗಳಿಗೆ ಸ್ಟ್ಯಾಂಪ್ ಪೇಪರ್ ಬೇಕು. ಯಾವುದೇ ನೋಂದಣಿ ವಿಷಯಕ್ಕೆ ಇರಲಿ. ಕೋರ್ಟಿನ ವಿಷಯಕ್ಕೆ ಇರಲಿ. ಇತ್ಯಾದಿಗಳಿಗೆ, ವಿಷಯಗಳಿಗೆ ಇರಲಿ. ಹಾಗಾಗಿ ನೀವು ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ರಾಂಚ್ ಇಲ್ಲದೇ ಹೋದಂತಹ ಕಡೆಯಲ್ಲಿ ಇನ್ಯಾವುದಾದರೂ ರಾಷ್ಟ್ರೀಕೃತ ಬ್ಯಾಂಕ್‌ಗಳಿಗೆ ಕೊಡುವುದಕ್ಕೆ ಸರ್ಕಾರ ಯೋಚಿಸಿದೆಯಾ ಅಥವಾ ಅದಕ್ಕೆ ತಕ್ಷಣ ನಿರ್ಧಾರ ತೆಗೆದುಕೊಳ್ಳುತ್ತದಾ ಎನ್ನುವಂತಹದು. ಗ್ರಾಹಕರ ಒತ್ತಾಯ ಇದೆ. ಬೇಡಿಕೆ ಇದೆ.

ಶ್ರೀ ಎಂ.ಪಿ. ಪ್ರಕಾಶ್ : ಮಾನ್ಯ ಅಧ್ಯಕ್ಷರೆ, ಈಗಾಗಲೇ ನಾನು ತಮ್ಮಲ್ಲಿ ವಿನಂತಿ ಮಾಡಿಕೊಂಡಂತೆ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಜೊತೆಗೆ, ಸ್ಟೇಟ್ ಬ್ಯಾಂಕ್ ಆಫ್ ಹೈದರಾಬಾದ್, ಸ್ಟೇಟ್ ಬ್ಯಾಂಕ್ ಆಫ್ ಇಂಡಿಯಾ, ಕರ್ನಾಟಕ, ಕಾರ್ಪೊರೇಷನ್ ಬ್ಯಾಂಕ್‌ಗಳಿಗೆ ನಾವು ಈಗಾಗಲೇ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದೇವೆ. ಅವು ಟ್ರೆಜರಿ ಬ್ಯಾಂಕ್‌ಗಳು ಆಗಿರಬೇಕು. ಬರೇ ಶೆಡ್ಯೂಲ್ಡ್ ಬ್ಯಾಂಕ್ ಆಗಿ ಟ್ರೆಜರಿ ಬ್ಯಾಂಕ್ ಆಗದೇ ಇದ್ದರೆ ಅವರು ಮಾಡುವುದಿಲ್ಲ. ಅವರೇನು ಹೇಳುತ್ತಾರೆ? ಈ ಮಾರಾಟದಿಂದ ಬರತಕ್ಕ ಆದಾಯಕ್ಕೂ, ಅಲ್ಲಿ ನಾವು ಮಾನವ ತಾಸುಗಳನ್ನು ಉಪಯೋಗಿಸಿಕೊಳ್ಳುವುದಕ್ಕೂ ಲಾಭ ಆಗುವುದಿಲ್ಲವೆಂದು ಹೇಳಿ, ಅವರು ಹೊಟ್ಟೆ ತುಂಬಿದವರು ಆಗಿರುವ ಕಾರಣಕ್ಕಾಗಿಯೇ ಇಂತಹದನ್ನು ಸ್ವೀಕಾರ ಮಾಡುವುದಿಲ್ಲ. ಆದರೆ ತಾವು ಹೇಳಿದಂತೆ ಕೆಲವು ಕಡೆ ಇಂತಹ ಶಾಖೆಗಳು ಇರುವುದಿಲ್ಲ. ಅದಕ್ಕಾಗಿಯೇ ಪ್ರಾಯಶಃ ಇನ್ನೊಂದು ತಿಂಗಳ ಅವಧಿಯನ್ನು ತಾವು ಕೊಟ್ಟರೆ ಈ ಕೌಂಟರನ್ನು ಅಲ್ಲಿ ಪ್ರಾರಂಭ ಮಾಡತಕ್ಕದ್ದಕ್ಕೆ ಕೂಡ ನಾವು ಯೋಚನೆ ಮಾಡುತ್ತೇವೆ.

ಅಧ್ಯಕ್ಷರು : ಮಾನ್ಯ ಅರಗ ಜ್ಞಾನೇಂದ್ರ ಅವರೇ ತಮ್ಮ ಪ್ರಶ್ನೆಗೆ ಇನ್ನು ಎರಡು ವಾರ ಕಾಲಾವಕಾಶವನ್ನು ಕೇಳಿದ್ದಾರೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಕಾಲಾವಕಾಶ ಏಕೆ ಬೇಕು ?

ಶ್ರೀ ಸಿದ್ದರಾಮಯ್ಯ (ಮಾನ್ಯ ಉಪ ಮುಖ್ಯಮಂತ್ರಿಗಳು) : ಮೂರು ವರ್ಷಕ್ಕೂ ಎಜಿ ರಿಪೋರ್ಟ್ ಮೇಲೆ ಏನೇನು ಕ್ರಮ ತೆಗೆದುಕೊಂಡಿದ್ದೀರಿ ಎಂದು ಬಹಳ ಡೀಟೇಲ್ ಆಗಿ ಕೇಳಿದ್ದಾರೆ. ಮೂರು ವರ್ಷದ ಎ.ಜಿ. ರಿಪೋರ್ಟ್ ಕೇಳಿರುವುದರಿಂದ ಮಾಹಿತಿಯನ್ನು ಎಲ್ಲಾ ತರಿಸಿಕೊಳ್ಳಬೇಕು. ಉತ್ತರ ಕೊಡುತ್ತೇನೆ. ಕಾಲಾವಕಾಶ ಕೇಳಿದ್ದೇನೆ.

ಅಧ್ಯಕ್ಷರು : ಈಗ ನಿಗದಿತ ಅವಧಿಯಲ್ಲಿ ದಯಮಾಡಿ ಉತ್ತರ ಕೊಡಬೇಕು.

(ಗೊಂದಲ)

ಶ್ರೀ ಜೆ.ಸಿ. ಮಾಧುಸ್ವಾಮಿ : ೧೦ ಲಕ್ಷ ರೂಪಾಯಿ ಮಿಸ್ ಅಪ್ರೊಪ್ರಿಯೇಷನ್ ಆಗಿದೆ.

ಶ್ರೀ ಅರಗ ಜ್ಞಾನೇಂದ್ರ : ನಿಮ್ಮ ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಇದು ಬೇಕೆಂದು ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ಬೇಕು ಎಂದು ಸಪ್ರೆಸ್ ಮಾಡಿದ್ದಾರೆ.

They have deliberately held up information for this question.

ಶ್ರೀ ಅರಗ ಜ್ಞಾನೇಂದ್ರ : ಈ ಪ್ರಶ್ನೆ ಬರಬಾರದು ಎಂದು ಹೇಳಿ ಉದ್ದೇಶ ಪೂರ್ವಕವಾಗಿ ನಿಮ್ಮ ಅಧಿಕಾರಿಗಳು ಮಾಡಿದ್ದಾರೆ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : No, no, He can't take it that easily. No, no way.

ಶ್ರೀ ಸಿದ್ಧರಾಮಯ್ಯ : ಅವರು ಯಾವ ಉದ್ದೇಶದಿಂದ ಹೇಳಿದ್ದಾರೋ ಗೊತ್ತಿಲ್ಲ, ನಮಗಂತೂ ದುರುದ್ದೇಶ ಇಲ್ಲ.

ಶ್ರೀ ಕೆ.ಆರ್. ರಮೇಶ್ ಕುಮಾರ್ : ನಿಮಗೆ ಇಲ್ಲ.

ಶ್ರೀ ಸಿದ್ಧರಾಮಯ್ಯ : ಸಂಬಂಧಪಟ್ಟಂತಹ ಉತ್ತರವನ್ನು ತರಿಸಿಕೊಡುತ್ತೇವೆ. ಯಾವುದೇ ಅಧಿಕಾರಿಗಳ ಮೇಲೆ ಕ್ರಮ ತೆಗೆದುಕೊಳ್ಳಬೇಕಾದರೆ ಕ್ರಮ ತೆಗೆದುಕೊಳ್ಳುತ್ತೇವೆ. ಅದರ ಬಗ್ಗೆ ಸಂದೇಹ ಬೇಡ.

ಶ್ರೀ ವಾಟಾಳ್ ನಾಗರಾಜ್ : ಮಾನ್ಯ ಉಪ ಮುಖ್ಯಮಂತ್ರಿಗಳಿಗೆ ನೂರಕ್ಕೆ ನೂರು ದುರುದ್ದೇಶ ಇಲ್ಲ.

ಶ್ರೀ ಕೆ.ಆರ್. ರಮೇಶ್‌ಕುಮಾರ್ : ಯಾರು ತಮ್ಮನ್ನು ರಕ್ಷಣೆ ಮಾಡಿಕೊಳ್ಳಬೇಕೋ ಅವರು ನಿಮ್ಮನ್ನು ಉಪಯೋಗಿಸಿದ್ದಾರೆ.

(ಗೊಂದಲ)

ಶ್ರೀ ವಾಟಾಳ್ ನಾಗರಾಜ್ : ನಿಮ್ಮ ಮೇಲೆ ನಮ್ಮ ಆಪಾದನೆ ಅಲ್ಲ.

ಶ್ರೀ ಅರಗ ಜ್ಞಾನೇಂದ್ರ : ಭ್ರಷ್ಟಾಚಾರವನ್ನು ಮುಚ್ಚಿಡುವಂತಹ ಒಂದು ಕುತಂತ್ರ ಅಧಿಕಾರಿಗಳದ್ದು ಅಧ್ಯಕ್ಷರೆ, ಸಿಎಜಿ ರಿಪೋರ್ಟ್‌ನಿಂದ ಉತ್ತರ ಬರಲಿಕ್ಕೆ ಸೆಕ್ರೆಟರಿಯೇಟ್‌ನಿಂದ ತರಿಸಿಕೊಡಬಹುದು.

(ಗೊಂದಲ)

ಶ್ರೀ ಅರಗ ಜ್ಞಾನೇಂದ್ರ : ಹಳ್ಳಿಗಾಡಿನಿಂದ ಬರಬೇಕೇನು ?

(ಗೊಂದಲ)

ಶ್ರೀ ಸಿದ್ಧರಾಮಯ್ಯ : ಮೂರು ವರ್ಷದ ಮಾಹಿತಿ ಬರಬೇಕು ಎನ್ನುವ ಕಾರಣಕ್ಕೋಸ್ಕರ ಕೊಟ್ಟಿಲ್ಲ, ಉತ್ತರ ಕೊಡುತ್ತೇನೆ.

ಅಧ್ಯಕ್ಷರು : ಈಗ ಜ್ಞಾನೇಂದ್ರ ಅವರೇ...

ಶ್ರೀ ಅರಗ ಜ್ಞಾನೇಂದ್ರ : ಈಗ ಭ್ರಷ್ಟಾಚಾರ ಬಹಿರಂಗ ಆದರೆ ತೊಂದರೆ ಆಗುತ್ತದೆ ಎನ್ನುವ ಕಾರಣಕ್ಕಾಗಿ. ಅವಮಾನ ಆಗುತ್ತದೆ ಎನ್ನುವ ಕಾರಣಕ್ಕಾಗಿ

ಅಧ್ಯಕ್ಷರು : ದಯಮಾಡಿ, ಅವರು ಹದಿನೈದು ದಿನಗಳ ಕಾಲಾವಕಾಶ ಕೇಳಿದ್ದಾರೆ.

ಶ್ರೀ ಅರಗ ಜ್ಞಾನೇಂದ್ರ : ಅಧಿಕಾರಿಗಳು ಮುನಿಸಿಕೊಂಡಿದ್ದಾರೆ. ಆದ್ದರಿಂದ ಇದನ್ನು ನಾನು ಪ್ರತಿಭಟನೆ ಮಾಡಿ ಹೊರಗಡೆ ಹೋಗುತ್ತೇನೆ. ಅಧಿಕಾರಿಗಳು ತಮ್ಮ ಭ್ರಷ್ಟಾಚಾರವನ್ನು ಮುಚ್ಚಿಕೊಳ್ಳುವುದಕ್ಕೋಸ್ಕರ ಇದನ್ನು ಮುಚ್ಚಿಟ್ಟಿದ್ದಾರೆ. ಉದ್ದೇಶ ಪೂರ್ವಕವಾಗಿ ಕೊಡುವುದಿಲ್ಲ, ಇದು ಪ್ರಚಾರ ಆದರೆ ನಮಗೆ ಅವಮಾನ ಆಗುತ್ತದೆ ಎನ್ನುವ ಕಾರಣಕ್ಕಾಗಿ ಮಾಡಿದ್ದಾರೆ. ಸಿಎಜಿ ರಿಪೋರ್ಟ್ ಬಂದ ನಂತರವೂ ಕೂಡ ಅವರ ಮೇಲೆ ಯಾರ ಮೇಲೂ ಕ್ರಮವನ್ನು ಕೈಗೊಳ್ಳುತ್ತಿಲ್ಲ, ಬಡ ಬೋರೇಗೌಡನ ಹಣ ಇಲ್ಲಿ ತಿಂದು ತೇಗಿರತಕ್ಕ ಅಧಿಕಾರಿಗಳ ಮೇಲೆ ನಿಷ್ಪೂರವಾಗಿರತಕ್ಕ ಕ್ರಮವನ್ನು ಕೈಗೊಳ್ಳದೇ ಇರತಕ್ಕಂಥ ನನಗೆ ಉತ್ತರ ಕೊಡದೇ ಇರುವಂತಹ ಸರ್ಕಾರದ ಕ್ರಮವನ್ನು ಪ್ರತಿಭಟನೆ ಮಾಡಿ ನಾನು ಸಭಾ ತ್ಯಾಗ ಮಾಡುತ್ತಿದ್ದೇನೆ.

ಅಧ್ಯಕ್ಷರು : ಆಯಿತು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅಧ್ಯಕ್ಷರೆ, ಸರ್ಕಾರ ರಕ್ಷಣೆ ಕೊಡಬಾರದು.

ಸರ್ಕಾರಿ ಅಧಿಕಾರಿಗಳು ಯಾರ ಉತ್ತರ ಕೊಡಲು ಹಿಂದೇಟು ಹಾಕುತ್ತಿದ್ದರೋ ಅವರಿಗೆ ರಕ್ಷಣೆ ಕೊಡಬಾರದು.

ಅಧ್ಯಕ್ಷರು : ನೀವು ಈ ತರಹ ಮಾಡಿದರೆ ಹೇಗೆ?

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಅವರ ಮೇಲೆ ಕ್ರಮ ತೆಗೆದುಕೊಳ್ಳಬೇಕು.

(ಮಾನ್ಯ ಸದಸ್ಯರಾದ ಶ್ರೀ ಅರಗ ಜ್ಞಾನೇಂದ್ರ ಅವರು ಈ ಸಂದರ್ಭದಲ್ಲಿ ಸಭಾ ತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು : ಈಗ ಅವರು ಉತ್ತರ ಕೊಡುತ್ತಿದ್ದಾರೆ. ಅದಕ್ಕೆ ಸಕಾರಣವನ್ನು ಕೊಟ್ಟಿದ್ದಾರೆ. ನೀವು ದಯಮಾಡಿ ಕುಳಿತುಕೊಳ್ಳಬೇಕು.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಬಹಳ ಗಂಭೀರವಾದಂತಹ ವಿಷಯ.

ಅಧ್ಯಕ್ಷರು : ನಾನು ಆಗಲೇ ಸರ್ಕಾರಕ್ಕೆ ಸ್ಪಷ್ಟವಾದ ಸೂಚನೆಯನ್ನು ಕೊಟ್ಟಿದ್ದೇನೆ. ಅವರು ಏನು ಕೇಳುತ್ತಾರೆ, ಆ ಕಾಲಾವಧಿಯಲ್ಲಿ ಉತ್ತರವನ್ನು ಒದಗಿಸಿದೇ ಇದ್ದರೆ ಈ ಸದನದ ಹಕ್ಕುಚ್ಯುತಿ ಆಗುತ್ತದೆ ಎಂದು ತಿಳಿದುಕೊಳ್ಳಬೇಕು. ಅದನ್ನು ಸೀರಿಯಸ್ ಆಗಿ ನಾನು ವ್ಯೂ ಮಾಡುತ್ತೇನೆ ಎನ್ನತಕ್ಕ ಮಾತನ್ನು ನಾನು ಹೇಳಿದ್ದೇನೆ. ಅದಕ್ಕೋಸ್ಕರ ಎಲ್ಲ ಮಂತ್ರಿಗಳೂ

(ಗೊಂದಲ)

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಈ ಸದನದಲ್ಲಿ ಉತ್ತರಗಳು ಇವಕ್ಕೆ ಯಾವೂ ಬರುವುದಿಲ್ಲ.

ಅಧ್ಯಕ್ಷರು : ಇನ್ ಕನ್‌ವೀನಿಯೆಂಟ್ ಪ್ರಶ್ನೆಗಳಿಗೋಸ್ಕರ, ಇನ್‌ಕನ್‌ವೀನಿಯೆಂಟ್ ಪ್ರಶ್ನೆಗಳನ್ನು ಕೇಳಿದಾಗ ಈ ತರಹ ಅಧಿಕಾರಿಗಳು ಮಾಡುತ್ತಾರೆ ಎನ್ನತಕ್ಕ ಭಾವನೆ ಇದೆ. ಅದನ್ನು ಹೋಗಲಾಡಿಸಬೇಕು ಎಂದು ನಾನು ವಿನಂತಿ ಮಾಡುತ್ತೇನೆ.

ಶ್ರೀ ಸಿದ್ಧರಾಮಯ್ಯ : ಆ ಭಾವನೆಗಳು ಬಂದಿರುವುದಕ್ಕೆ ಸಾಧ್ಯ ಇದೆ. ಮೂರು ಜನ ಏಕೆ ಒಟ್ಟಿಗೇ ಮಾತನಾಡುತ್ತೀರಿ. ಒಬ್ಬರು ವಿಷಯ ಹೇಳಿ.

ಶ್ರೀ ಜೆ.ಸಿ. ಮಾಧುಸ್ವಾಮಿ : ರಿಟೈರ್ ಆಗಿ ಮೂರು ವರ್ಷವಾದರೆ ಅವರ ಮೇಲೆ

ಯಾವುದೇ ಕ್ರಮವನ್ನು ಸರ್ಕಾರ ಜರುಗಿಸುವುದಕ್ಕೆ ಆಗುವುದಿಲ್ಲ ಎನ್ನುವ ಕಾರಣಕ್ಕಾಗಿ ಯಾರ ಮೇಲೂ ಆಕ್ಷನ್ ಅನ್ನು ಇನಿಷಿಯೇಟ್ ಮಾಡುತ್ತಿಲ್ಲ. ಒಂದೇ ಒಂದು ಮಿಸ್ ಅಪ್ರೋಪ್ರಿಯೇಷನ್ ಕೇಸ್‌ನಲ್ಲಿ ಈ ಸ್ಟೇಟ್ ಗವರ್ನಮೆಂಟ್. ಒಬ್ಬ ಅಧಿಕಾರಿಯನ್ನು, ಸೀನಿಯರ್ ಲೆವೆಲ್ ಆಫೀಸರ್ ಒಬ್ಬರನ್ನು ಸಸ್ಪೆಂಡ್ ಮಾಡಿಲ್ಲ, ಒಂದೇ ಒಂದೇ ರಿಪ್ಲೈ ನಿಮ್ಮ ಕಾಲದಲ್ಲಿ ಅಸೆಂಬ್ಲಿಗೆ ಬರುವುದಕ್ಕೆ ಅವರು ಬಿಡುವುದಿಲ್ಲ. ನಮಗೆ ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ಬಹಳ ಗೌರವ ಇದೆ. But this question will never be answered ನೀವು ಯಾವತ್ತು ಕೇಳಿದರೂ...

ಶ್ರೀ ಸಿದ್ಧರಾಮಯ್ಯ : I am going to answer this question. I am going to supply the information.

ಶ್ರೀ ಜೆ.ಸಿ. ಮಾಧುಸ್ವಾಮಿ : ಯಾವತ್ತು ಹೇಳಿ ಸಾರ್? When are going to answer this question.

ಶ್ರೀ ಸಿದ್ಧರಾಮಯ್ಯ : ಈ ಅಸೆಂಬ್ಲಿ ೩೧ರೊಳಗೆ ಮುಗಿದೆ ಕೊಡುವುದಕ್ಕೆ ಆಗುವುದಿಲ್ಲ, ಮುಂದುವರಿದರೆ ಯಾವ ಕಾರಣಕ್ಕಾಗಿಯಾದರೂ ೩೧ನೇ ತಾರೀಖಿಗಿಂತ ಮುಂದಕ್ಕೆ ಹೋದರೆ ಉತ್ತರ ಕೊಡಿಸುತ್ತೇವೆ.

ಶ್ರೀ ಜೆ.ಸಿ. ಮಾಧುಸ್ವಾಮಿ : ಉತ್ತರ ಕೊಡಿಸಲೇಬೇಕು.

(ಗೊಂದಲ)

(ಶ್ರೀ ಅರಗ ಜ್ಞಾನೇಂದ್ರ : ತಮ್ಮ ಸ್ಥಾನ ಬಿಟ್ಟು ಮಾತನಾಡುತ್ತಿದ್ದರು)

ಶ್ರೀ ಸಿದ್ಧರಾಮಯ್ಯ : ತೀರ್ಮಾನ ಮಾಡಿದ್ದೇವಾ? ಉತ್ತರ ಕೊಡಿಸುತ್ತೇವೆ. ಉತ್ತರ ಕೊಡಿಸಲಾಗುವುದು. ಯಾರಿಗೂ ರಕ್ಷಣೆ ಮಾಡಬೇಕು ಎಂಬ ಪ್ರಶ್ನೆ ಇಲ್ಲ.

ಅಧ್ಯಕ್ಷರು : ದಯಮಾಡಿ ಕೇಳಬೇಕು. ಈಗೇನಾದರೂ ೧೫ ದಿನಗಳಲ್ಲಿ ಸಂಬಂಧಪಟ್ಟ ಎಲ್ಲ ಸದಸ್ಯರಿಗೆ ಆ ಉತ್ತರ ಕೊಡದೇ ಇದ್ದರೆ ಮುಂದಿನ ಅಧಿವೇಶನದಲ್ಲಿ ಅದನ್ನು ಎತ್ತಬಹುದು. ಅದರ ಬಗ್ಗೆ ನಾನು ಚರ್ಚೆಗೆ ಅವಕಾಶ ಕೊಡುತ್ತೇನೆ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಸಾರ್ ನಮ್ಮ ಪ್ರಶ್ನೆ ಮಾನ್ಯ ಸಿದ್ಧರಾಮಯ್ಯನವರ ಬಗ್ಗೆ ನಮಗೆ ಯಾವ ಅನುಮಾನವೂ ಇಲ್ಲ. ಅಧಿಕಾರಿಗಳು ಬೇಕು ಎಂದು ಮಾಡುತ್ತಿದ್ದಾರೆ.

ಅಧ್ಯಕ್ಷರು : ಮಾನ್ಯ ಅಲ್ಕೋಡ್ ಹನುಮಂತಪ್ಪನವರು ತಮ್ಮ ಪ್ರಶ್ನೆ ಕೇಳಿ. ನಾನು

ಇಷ್ಟು ಹೇಳಿದರೂ ಮತ್ತೆ ಮತ್ತೆ ಎದ್ದು ಹೇಳುತ್ತಿದ್ದೀರಿ, ದಯಮಾಡಿ ಕುಳಿತುಕೊಳ್ಳಿ. ಅಲ್ಲೋಡ್ ಹನುಮಂತಪ್ಪನವರು ಕೇಳಿ.

ಶ್ರೀ ಜಿ.ವಿ. ಶ್ರೀರಾಮರೆಡ್ಡಿ : ಮಾನ್ಯ ಸಿದ್ಧರಾಮಯ್ಯನವರನ್ನೂ ದಾರಿ ತಪ್ಪಿಸುತ್ತಿದ್ದಾರೆ. ಸದನವನ್ನೂ ದಾರಿ ತಪ್ಪಿಸುತ್ತಿದ್ದಾರೆ.

ಶ್ರೀ ವಾಟಾಳ್ ನಾಗರಾಜ್ : ಅಧಿಕಾರಿಗಳು ಉದ್ದೇಶಪೂರ್ವಕವಾಗಿ ಮಾಡತಕ್ಕಂಥ ಕುತಂತ್ರ ಇದಾಗಿದೆ.

ಶ್ರೀ ಜಿ.ವಿ.ಶ್ರೀರಾಮರೆಡ್ಡಿ : ಅವರು ಹಣಕಾಸು ಮಂತ್ರಿಗಳನ್ನು ದಾರಿ ತಪ್ಪಿಸುತ್ತಿದ್ದಾರೆ.

ಅಧ್ಯಕ್ಷರು : ದಯಮಾಡಿ ಸಹಕರಿಸಬೇಕು. ಈಗ ಯಾವ ಪ್ರಶ್ನೆಗಳನ್ನು ಕೇಳಬೇಕಾಗಿದೆಯೋ, ಅದನ್ನು ಮುಂದಿನ ಅಧಿವೇಶನದಲ್ಲಿ ತಾವು ಪ್ರಸ್ತಾಪಿಸಿದರೆ, ಎಲ್ಲದಕ್ಕೂ ನಾನು ಉತ್ತರಗಳನ್ನು ಕೊಡಿಸಿಕೊಡುತ್ತೇನೆ.

ಶ್ರೀ ವಿಶ್ವೇಶ್ವರ ಹೆಗಡೆ ಕಾಗೇರಿ : ಮುಂದಿನ ಅಧಿವೇಶ ಸೇರುವುದರೊಳಗೆ ನಾವು ಕೇಳಬೇಕೆಂದಿರುವ ಪ್ರಶ್ನೆಗಳು ಮರೆತುಹೋಗುತ್ತದೆ.

ಅಧ್ಯಕ್ಷರು : ಇದು ಮರೆತುಹೋಗುವ ಪ್ರಶ್ನೆಯಲ್ಲ. ನಿಮಗೆ ಹೇಗೆ ಮರೆತುಹೋಗುತ್ತದೆ? ನೀವು ಈಗ ಕೇಳಿರುವ ಯಾವ ಪ್ರಶ್ನೆಗಳಿಗೆ ಉತ್ತರಗಳು ಬಂದಿಲ್ಲವೋ, ಅಂತಹ ಪ್ರಶ್ನೆಗಳಿಗೆ ಮುಂದಿನ ಅಧಿವೇಶನದಲ್ಲಿ ಉತ್ತರ ಕೊಡಿಸುತ್ತೇನೆ. ಅದರ ಜವಾಬ್ದಾರಿ ನನ್ನದು. ಆದುದರಿಂದ, ದಯಮಾಡಿ ಸಹಕರಿಸಬೇಕು.

ಶ್ರೀ ವಾಟಾಳ್ ನಾಗರಾಜ್ : ಅಧಿವೇಶನ ಸೇರುವುದು ಇನ್ನು ನಾಲ್ಕು ತಿಂಗಳು ಕಳೆದ ನಂತರವೇ ಆಗ ಉತ್ತರ ಕೊಡಿಸುವುದರಿಂದ ಏನು ಸಿಗುತ್ತದೆ ?

ಶ್ರೀ ಚಿಕ್ಕನಗೌಡರ ಸಿದ್ದನಗೌಡ ಈಶ್ವರಗೌಡ : ಮುಂದಿನ ಅಧಿವೇಶನ ಬರುವುದರೊಳಗೆ ಸರ್ಕಾರ ಇರುತ್ತದೆಯೇ?

ಅಧ್ಯಕ್ಷರು : ಆಯಿತು, ಕುಳಿತುಕೊಳ್ಳಿ. ದಯಮಾಡಿ ಸಹಕರಿಸಿ.